ಅ) ಈ ನಾಲೆಗಳಲ್ಲಿ ನೀರನ್ನು ನಿಲ್ಲಿಸಿದಾಗ ಇದರ ರಿಪೇರಿಯನ್ನು ಸಮರ್ಪಕವಾಗಿ ಮಾಡುತ್ತಿಲ್ಲದಿರುವುದು ನಿಜವೆ; ಹಾಗಿದ್ದಲ್ಲಿ ನಾಲೆ ನೀರು ನಿಲ್ಲಿಸಿದಾಗ ರಿಪೇರಿ ಮಾಡದಿರಲು ಕಾರಣವೇನು;

ಇ) ಈ ಚಾನಲ್ ಮೇಲೆ ಇರುವ ಸಂಪರ್ಕ ಸೇತುವೆಗಳು ಮತ್ತು ಕಲ್‌ವರ್ಟುಗಳು ಹಾಗೂ ಅಕ್ವಡೇಟ್‌ಗಳು ಎರಡು ವರ್ಷದಿಂದ ಬಿದ್ದಿರುವುದನ್ನು ಈವರೆಗೆ ರಿಪೇರಿ ಮಾಡದಿರಲು ಕಾರಣವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಬಂದಿದೆ.

ಆ) ಪ್ರತಿ ವರ್ಷವೂ ನಾಲೆಗಳಲ್ಲಿ ನೀರನ್ನು ನಿಲ್ಲಿಸಿದ ಅವಧಿಯಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಂಡ ದುರಸ್ತಿ ಕಾರ್ಯವನ್ನುಸಮರ್ಪಕವಾಗಿ ಮಾಡಲಾಗುತ್ತಿದೆ.

ಇ) ಕಾಮಗಾರಿಗಳ ಆಗತ್ಯತೆಯನ್ನು ಪರಿಗಣಿಸಿ ದುರಸ್ತಿ ಕಾರ್ಯವನ್ನು ಅನುದಾನ ಲಭ್ಯತೆಗೆ ಅನುಗುಣವಾಗಿ ಈ ವರ್ಷವೇ ಕೈಗೊಳ್ಳಲಾಗುವುದು.

ಭದ್ರಾ ನಾಲೆಗಳ ವ್ಯಾಪ್ತಿಗೆ ನೀರುಗಂಟಿಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

2360(2843) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭದ್ರಾ ನಾಲೆಗಳ ವ್ಯಾಪ್ತಿಗೆ ನೀರುಗಂಟಿಗಳನ್ನು ನೇಮಕ ಮಾಡುವ ಅವಕಾಶವೇನಾದರೂ ಸರ್ಕಾರದ ತೀರ್ಮಾನದಲ್ಲಿಯೇ;

ಆ) ಹಾಗಿಲ್ಲದಿದ್ದರೆ ಈಗ ಇರುವ ನೀರುಗಂಟಿಗಳು ಅಥವಾ ಸೌಡಿಗಳಿಗೆ ನಾಲೆಗಳ ರಿಪೇರಿ ಹಣದಿಂದ ಸಂಬಳ ಕೊಡುತ್ತಿರುವುದರಿಂದ ನಾಲೆ ರಿಪೇರಿ ಕುಂಠಿತಗೊಳ್ಳುವುದಿಲ್ಲವೆ ಇದಕ್ಕೆ ಪರ್ಯಾಯ ವ್ಯವಸ್ಥೆ ಎನು?

ಇ) ನೀರುಗಂಟಿ ಅಥವಾ ಸೌಡಿಗಳು ಇಲ್ಲದಿದ್ದರೆ ನಾಲೆಯ ಕೆಲಸಗಳಿಗೆ ತೊಂದರೆಯಾಗುವುದಿಲ್ಲವೆ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಇಲ್ಲ. ನೀರಾವರಿ ಯೋಜನೆಗಳಲ್ಲಿ ನೀರು ವಿತರಣಾ ವ್ಯವಸ್ಥೆಯನ್ನು ನೀರು ಬಳಕೆದಾರರ ಸಂಘಗಳಿಗೆ ವಹಿಸಿಕೊಡುವುದು ಸರ್ಕಾರದ ನಿಲುವಾಗಿದೆ. ನೀರು ಬಳಕೆದಾರರ ಸಂಘಗಳು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾಗುವವರೆಗೆ ಈಗಿರುವ ವ್ಯವಸ್ಥೆಯನ್ನು ಮುಂದುವರೆಸಲಾಗುವುದು

ಅ) ನಾಲಾ ರಿಪೇರಿ, ಸೌಡಿಗಳ ಸಂಬಳ ಇತ್ಯಾದಿಗಳನ್ನು ಲೆಕ್ಕ ಶೀರ್ಷಿಕೆ 2701 ಯೋಜನೇತರ ಅಡಿಯಲ್ಲಿ ಭರಿಸಲಾಗುತ್ತಿದೆ. ಭದ್ರಾ ಯೋಜನೆಗೆ ಈ ಸಾಲಿನಲ್ಲಿ ಮೇಲ್ಕಂಡ ಲೆಕ್ಕ ಶೀರ್ಷಿಕೆಯಲ್ಲಿ ರೂ.463.75 ಲಕ್ಷಗಳಿವೆ. ಈ ಮೊತ್ತವನ್ನು ಹೆಚ್ಚಿಸಬೇಕೆಂದು ಪ್ರಸ್ತಾವನೆ ಸರ್ಕಾರದ ಮುಂದಿದ್ದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಮೇಲಿನ 'ಅ' ನಲ್ಲಿ ತಿಳಿಸಿರುವಂತೆ ಈಗಿರುವ ವ್ಯವಸ್ಥೆಯನ್ನು ಸಧ್ಯಕ್ಕೆ ಮುಂದುವರೆಸಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ವಿತರಣೆ.

2361(2844) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 2 ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಾರ್ವಜನಿಕರಿಗೆ ಎಷ್ಟು ನಿವೇಶನ ಹಂಚಿಕೆಯಾಗಿದೆ. ಇದರಲ್ಲಿ ಅಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಎಷ್ಟು ನಿವೇಶನ ಕೊಡಲಾಗಿದೆ.

ಆ) ಇದರಲ್ಲಿ ಶಾಸಕರಿಗೆ ಮಾಜಿ ಶಾಸಕರಿಗೆ ಲೋಕಸಭಾ ರಾಜ್ಯಸಭಾ ಸದಸ್ಯರಿಗೆ ಎಷ್ಟು ನಿವೇಶನಗಳನ್ನು ಕಳೆದ ಎರಡು ವರ್ಷದಿಂದ ಹಂಚಿಕೆಯಾಗಿದೆ.

ಇ) ಯಾವ ಯಾವ ಬಡಾವಣೆಗಳಲ್ಲಿ ಎಷ್ಟು ನಿವೇಶನಗಳನ್ನು ಈ ವರ್ಷ ಕೈಗೆತ್ತಿಕೊಳ್ಳಲಾಗುವುದು. ಅವುಗಳ ಸಂಖ್ಯೆ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಕಳೆದ ಎರಡು ವರ್ಷದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 15,000 ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಿರುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ನೌಕರರು : ಅಧಿಕಾರಿಗಳಿಗೆ ಮತ್ತು ಕೇಂದ್ರ ಸರ್ಕಾರ : ಸ್ವಾಯತ ಸಂಸ್ಥೆಗಳ ನೌಕರರು : ಅಧಿಕಾರಿಗಳಿಗೆ ಒಟ್ಟು 1784 ನಿವೇಶನಗಳನ್ನು ಹಾಗೂ 13,216 ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿರುತ್ತದೆ.

ಆ) 14 ಬಿಡಿ ನಿವೇಶನಗಳನ್ನು ಶಾಸಕರಿಗೆ ಹಾಗೂ ಮಾಜಿ ಶಾಸಕರಿಗೆ ಹಂಚಿಕೆ ಮಾಡಲಾಗಿರುತ್ತದೆ.

ಇ) ಈ ಕೆಳಕಂಡ ಬಡಾವಣೆಗಳಲ್ಲಿ ಸುಮಾರು 20,000 ನಿವೇಶನಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಅ) ಬನಶಂಕರಿ 6ನೇ ಹಂತ

ಆ) ಅಂಜನಾಪುರ ಮುಂದುವರಿದ ಬಡಾವಣೆ.